ಆತ್ಮೀಯವಾಗಿ ಅವಳ ಕೂದಲು ನೇವರಿಸಿದಳು. ತನ್ನ ಮಗಳು ಈಗ ಇಷ್ಟೇ ಎತ್ತರ. ಇಷ್ಟೇ ದಪ್ಪ ಇರಬಹುದು. ಪುರುಷೋತ್ತಮ ಅವಳನ್ನು ತನಗೆ ತೋರಿಸಿಯೇ ಇಲ್ಲ. ಕೋರ್ಟ್‌ಗೆ ಎಂದಿಗೂ ಕರೆದು ತಂದಿರಲಿಲ್ಲ.

ತನಗೂ ತನ್ನ ಮಗಳನ್ನ ಕೋರ್ಟ್‌ನ ಆವರಣದಲ್ಲಿ ಕಾಣುವ ಬಯಕೆ ಇರಲಿಲ್ಲ.

ಅವಳು ಬಟ್ಟಲುಗಣ್ಣರಳಿಸಿ ನಕ್ಕಳು. ಅಚ್ಚರಿಯಿಂದ ವನಿತಾಳನ್ನು ನೋಡಿದಳು.

ಬಿಳುಪು ಲೆಗ್ಗಿಂಗ್ಸ್–ಕಪ್ಪು ಬಣ್ಣದ ಕುರ್ತಾದಲ್ಲಿ ಅವಳು ಕಾಲೇಜು ತರುಣಿಯಂತೆ ಕಂಡಳು.

ತುಂಬಿದ ಕೆನ್ನೆಗಳು, ಹೊಳೆಯುವ ಬಣ್ಣ, ಅಂದವಾದ ಮೈಕಟ್ಟು, ಕಿವಿಯವರೆಗೆ ಬರುವಂತೆ ಚಿಕ್ಕದಾಗಿ ಕತ್ತರಿಸಿದ್ದ ಕೂದಲು, ತೆಲುಗಾಜಿನ ಕನ್ನಡಕ, ಮುಖದಲ್ಲಿದ್ದ ಆತ್ಮವಿಶ್ವಾಸದ ಗತ್ತು ಕೈಯಲ್ಲಿದ್ದ ಲ್ಯಾಪ್‌ಟಾಪ್, ಬೆಲೆಬಾಳುವ ಐಫೋನು ಕಂಡು ವಿಸ್ಮಿತಳಾಗಿದ್ದಳು.

'ನಿಮಗೆ ನನ್ನಷ್ಟು ವಯಸ್ಸಿನ ಮಗಳಿದಾಳಾ... ಐಕಾಂಟ್ ಬಿಲೀವ್' ಅಚ್ಚರಿಯಿಂದ ನಕ್ಕಳು.

'ಹೂಂ... ಇದಾಳೇಮ್ಮಾ... ನಿನ್ನ ಹಾಗೇ ಇದಾಳೇ...'

ವನಿತಾಗೆ ಅವಳ ಸನಿಹ, ಅವಳ ಸ್ಪರ್ಶ ಆಹ್ಲಾದವೆನಿಸುತ್ತಿತ್ತು.

'ನಾನು ಇಂಟರ್‌ನೆಟ್‌ನಲ್ಲಿ ಮೇಡಂ ಬಗ್ಗೆ ತಿಳ್ಕೊಂಡು ಬಂದೆ. ಅವರ ಅಡ್ರೆಸು ಕೂಡಾ ನೆಟ್‌ನಲ್ಲಿ ಸಿಕ್ತು. ಅವರಿಂದ ಒಂದು ಫೇವರ ಕೇಳೋಣಾಂತ ಬಂದಿದೀನಿ... ಗೊತ್ತಿಲ್ಲ ಏನಾಗುತ್ತೋ?... ಅವರಿಗೆ ಫೀಸ್ ಕೊಡೋಕೆ ನಂಗಾಗಲ್ಲ. ಆದರೂ... ಏನಾದ್ರೂ ಹೆಲ್ಪ್ ಮಾಡ್ತಾರೇನೋ ಅಂತ ಆಸೆಯಿಂದ ಬಂದಿದೀನಿ... ಅಪಾಯಿಂಟ್‌ಮೆಂಟ್ ಏನೂ ಇಲ್ಲ...'

ಹುಡುಗಿ ಗೊಂದಲದಲ್ಲಿ ತೊಳಲಾಡುತ್ತ ಹೇಳಿದಾಗ ವನಿತಾ ತನ್ನ ಲ್ಯಾಪ್‌ಟಾಪ್–ಫೋನುಗಳನ್ನು ಟೇಬಲ್ ಮೇಲಿಟ್ಟು ಅವಳ ಕಡೆಗೆ ತಿರುಗಿದಳು.

ಅವಳನ್ನು ಎದೆಗಪ್ಪಿ ಹಿಡಿದು ಸಂತೈಸುವ ಮನಸಾಯಿತು. ಈಚೀಚೆಗೆ ಯಾಕೋ ತಾನು ತುಂಬಾ ಎಮೋಷನಲ್ ಆಗ್ತದೀನಿ ಅನಿಸಿತ್ತು.

'ಏನು ಪ್ರಾಬ್ಲಂ ಅಂತ ಹೇಳು ಕಂದಾ... ನಾನು ನಿನ್ನ ಜೊತೆಗಿದ್ದೀನಿ ಹೇಳು, ನೀನು ಯಾರ ಮಗಳು... ಏನು ಸಮಸ್ಯೆ? ನಾನು ಖಂಡಿತ ನಿಂಗೆ ಖಂಡಿತವಾಗಿಯೂ ಸಹಾಯ ಮಾಡ್ತೀನಿ. ಮೇಡಂ ಹತ್ರ ಮಾತಾಡೋಣ...'

'ಯೇ. ಇಟ್ಸ್ ಓ.ಕೆ. ಆಂಟೀ, ನಾನು ಮೇಡಂ ಹತ್ರಾನೇ ಮಾತಾಡ್ತೀನಿ.'

ಆ ಹುಡುಗಿ ಕಾಫಿಯ ಕಪ್ಪನ್ನು ಮೇಜಿನ ಮೇಲಿಟ್ಟು – ಬೆರಗುಗಣ್ಣುಗಳಿಂದ ಆಫೀಸಿನ ವಾತಾವರಣವನ್ನು ವೀಕ್ಷಿಸತೊಡಗಿದಳು.

ಒಳಗಿನಿಂದ ಫೈಲುಗಳನ್ನ ತಂದು ಟೇಬಲ್‌ನ ಮೇಲೆ ಜೋಡಿಸಲು ಬಂದ ಪುಷ್ಪಲತಾ ಅಪರಿಚಿತ ಬಾಲಕಿಯನ್ನು ಕಂಡು ಹುಬ್ಬೇರಿಸಿದಳು.

'ಮೇಡಂ, ನಮಸ್ತೇ... ನಾನು ಪ್ರಕೃತಿ ಅಂತ. ಬೆಥಡ್ರಿಲ್ ಕಾನ್ವೆಂಟ್‌ನಲ್ಲಿ ಒಂಬತ್ತನೇ ಸ್ಟಾಂಡರ್ಡ್ ಓದ್ತಿದೀನಿ. ನಂದೊಂದು ಪ್ರಾಬ್ಲಂ ಇತ್ತು. ಅದಕ್ಕೆ ಮೇಡಂ ಹತ್ರ ಮಾತಾಡೋಕೆ ಬಂದೆ. ಮನೇಲಿ ಅಪ್ಪಂಗೆ, ಅಮ್ಮಂಗೆ ಯಾರಿಗೂ ಹೇಳದೇ ಬಂದಿದೀನಿ. ಸ್ಕೂಲು ಮುಗಿದ ತಕ್ಷಣ ಆಟೋ ಹತ್ಕೊಂಡು ಬಂದ್ ಬಿಟ್ಟಿದೀನಿ. ಲೇಟಾದ್ರೆ ಅಮ್ಮ, ಅಜ್ಜಿ ಗಾಬರಿಯಾಗ್ತಾರೆ, ಪ್ಲೀಸ್, ನಾನು ಮೇಡಂ ಹತ್ರ ಮಾತಾಡಬಹುದಾ...'

ಒಂದೇ ಉಸುರಿಗೆ ಪುಷ್ಪಲತಾ ಬಳಿ ವಿನಂತಿಸಿಕೊಳ್ಳುವಾಗ ವನಿತಾ ಬೆಚ್ಚಿಬಿದ್ದಳು.

ಪ್ರಕೃತಿ... ತನ್ನ ಮಗಳು... ನನ್ನ ಮುದ್ದಿನ ಮಗಳು. ಅದಕ್ಕೇ ಏನೋ ಅವಳನ್ನು ಕಂಡಾಗ ತನ್ನ